◆ **ಜೇನುಗೂಡಿನಲ್ಲಿ ಸಿಹಿ ಸವಿದದ್ದಾಯಿತು. ಮುಂದಿನ ಪಯಣ ಹೇಗಿತ್ತು?**

‘ಚಂದವಳ್ಳಿಯ ತೋಟ’ ಎರಡನೇ ಸಿನಿಮಾ. ಟಿ.ವಿ. ಸಿಂಗ್ ಠಾಕೂರ್ ನಿರ್ದೇಶಕರು. ಮೊದಲ ಸಿನಿಮಾದಲ್ಲಿನ ಮೂವರು ನಾಯಕಿಯರಲ್ಲಿ ನಾನೂ ಒಬ್ಬಳು; ಎರಡನೇ ಸಿನಿಮಾದಲ್ಲಿ ನಾನೊಬ್ಬಳೇ ಹೀರೊಯಿನ್. ಆ ಸಿನಿಮಾ ಪ್ರಶಸ್ತಿಯನ್ನೂ ಪಡೆಯಿತು. ದೆಹಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಇಂದಿರಾಗಾಂಧಿ ಅವರು ನನ್ನನ್ನು ಬಳಿಗೆ ಕರೆದು ಪ್ರೀತಿಯಿಂದ ಮುತ್ತು ಕೊಟ್ಟರು, ಫೋಟೊ ತೆಗೆಸಿಕೊಳ್ಳಲು ಅವಕಾಶ ಕೊಟ್ಟರು.

‘ಚಂದವಳ್ಳಿಯ ತೋಟ’ ಚಿತ್ರದ ಸಂದರ್ಭದಲ್ಲಿ ಕಮಲಕುಮಾರಿ ಹೆಸರು ಉದ್ದವಾಯಿತು ಎಂದರು. ಕಮಲಾ ಹೆಸರಿನ ಯಾರೂ ಕಲಾವಿದರಾಗಿ ಏಳಿಗೆ ಕಾಣದ್ದರಿಂದ ಜಯಂತಿ ಎಂದು ನಾಮಕರಣವಾಯಿತು. ಕೆಲವು ಸಿನಿಮಾಗಳಲ್ಲಿ ಜಯಂತಿ ಹೆಸರಿನ ನಂತರ ಕಮಲಕುಮಾರಿ ಎಂದು ಬ್ರಾಕೆಟ್‌ನಲ್ಲಿ ಬರೆದಿರುವುದಿದೆ.

ನನ್ನ ನಾಲ್ಕನೇ ಸಿನಿಮಾ ‘ಮಿಸ್ ಲೀಲಾವತಿ’. ಮೊದಲಿಗೆ ಸಾಹುಕಾರ್ ಜಾನಕಿ ಅವರನ್ನು ನಾಯಕಿಯನ್ನಾಗಿ ನಿರ್ದೇಶಕ ಎಂ.ಆರ್. ವಿಠ್ಠಲ್ ಅವರು ಆರಿಸಿದ್ದರು. ಅವರ ಸ್ನೇಹಿತೆಯ ಪಾತ್ರ ನನ್ನದು. ಆದರೆ, ನಾಯಕಿ ಪಾತ್ರಕ್ಕೆ ಅವಶ್ಯವಾಗಿದ್ದ ಸ್ವಿಮ್ಮಿಂಗ್ ಕಾಸ್ಟ್ಯೂಮ್ ಹಾಕಿಕೊಳ್ಳಲು ಜಾನಕಿಯಮ್ಮ ಒಪ್ಪಲಿಲ್ಲ. ಹಾಗಾಗಿ, ಆ ಪಾತ್ರ ನನ್ನ ಪಾಲಿಗೆ ಬಂತು. ವಿಠ್ಠಲ್ ಅಪ್ಪಾಜಿಗೆ ನನ್ನನ್ನು ಕಂಡರೆ ತುಂಬಾ ಇಷ್ಟ. ಅವರ ಮಗಳು ನನ್ನ ರೀತಿಯೇ ಇದ್ದರಂತೆ. ಗಂಡಹೆಂಡತಿ ಇಬ್ಬರೂ ಆಗಾಗ ನನ್ನನ್ನು ನೆನಪಿಸಿಕೊಂಡು ಬಂದು ನೋಡಿಕೊಂಡು ಹೋಗುತ್ತಿದ್ದರು. ಅಪ್ಪಾಜಿ ಮೊದಲು ದೃಶ್ಯ ವಿವರಿಸಿ, ‘ಆ ದೃಶ್ಯ ಒಪ್ಪಿಕೊಂಡರೆ ಮಾತ್ರ ಮುಂದಿನ ಕಥೆ ಹೇಳುತ್ತೇನೆ’ ಎಂದರು. ನಾನು ಸ್ವಿಮ್ಮಿಂಗ್ ಕಲಿತಿದ್ದರಿಂದ ಆ ದೃಶ್ಯ ಸಂಕೋಚವೆನ್ನಿಸಲಿಲ್ಲ. ನನ್ನ ತಾಯಿ ನನ್ನನ್ನು ಹುಡುಗನಂತೆಯೇ ಬೆಳೆಸಿದ್ದರು. ಹುಡುಗರ ಬಟ್ಟೆಗಳನ್ನೇ ಹಾಕುತ್ತಿದ್ದರು. ಹಾಗಾಗಿ ಪಾತ್ರಗಳ ಮಡಿವಂತಿಕೆಯ ಬಗ್ಗೆ ಸಂಕೋಚಪಡುವ ಪ್ರಶ್ನೆ ಇರಲಿಲ್ಲ. ‘ಜೇಡರಬಲೆ’ಯಲ್ಲೂ ಸ್ವಿಮ್ ಸೂಟ್‌ನಲ್ಲಿ ಕಾಣಿಸಿಕೊಂಡೆ.

◆ **ರಾಜ್‌ಕುಮಾರ್ ಅವರನ್ನು ಮೊದಲ ಬಾರಿಗೆ ಭೇಟಿಯಾದ ಅನುಭವ ಹೇಗಿತ್ತು?**

ಆಗ ಮದರಾಸಿನಲ್ಲಿ ಮಾರ್ನಿಂಗ್ ಷೋಗಳಲ್ಲಿ ಕನ್ನಡ ಸಿನಿಮಾ ಪ್ರದರ್ಶಿಸುತ್ತಿದ್ದರು. ರಾಜಕುಮಾರ್ ಅವರ ‘ಬೇಡರ ಕಣ್ಣಪ್ಪ’ ಚಿತ್ರವನ್ನು ನೋಡಿದ್ದು ಅಲ್ಲಿಯೇ. ಆ ಸಿನಿಮಾ ನೋಡಿದ ಮೇಲೆ, ಇವರೇ ‘ಚಂದವಳ್ಳಿಯ ತೋಟ’ದಲ್ಲಿ ನಿಮ್ಮ ಜೊತೆ ನಟಿಸುವವರು ಎಂದು ಸಹಾಯಕ ನಿರ್ದೇಶಕರಾದ ಭಗವಾನ್ ಹೇಳಿದರು. ಕಣ್ಣಪ್ಪ ಚಿತ್ರದಲ್ಲಿ ನೋಡಿದ್ದು ಕಾಡುಮನುಷ್ಯನ ಪಾತ್ರಧಾರಿಯನ್ನು. ಸೆಟ್‌ನಲ್ಲಿ ನೋಡಿದರೆ ಬೇರೆಯದೇ ವ್ಯಕ್ತಿ. ಇಬ್ಬರೂ ಬೇರೆ ಬೇರೆ ವ್ಯಕ್ತಿ ಅನ್ನಿಸಿತು. ಪಾತ್ರಕ್ಕೆ ತಕ್ಕಂತೆ ರಾಜ್ ಬದಲಾಗುವ ಪರಿ ಅಚ್ಚರಿ ಮೂಡಿಸಿತು.



**ಒಳ್ಳೆಯದು-ಕೆಟ್ಟದ್ದು ಜೊತೆಜೊತೆಗೆ ಅನುಭವಿಸಿದೆ. ಕುಂಟುತ್ತ, ನಡೆಯುತ್ತ, ಓಡುತ್ತ ವೃತ್ತಿ-ವೈಯಕ್ತಿಕ ಬದುಕು ಸಾಗಿದೆ.**

◆ **ಚಿತ್ರೀಕರಣ ಸಂದರ್ಭದಲ್ಲಿನ ಕೆಲವು ಸ್ವಾರಸ್ಯಗಳನ್ನು ನೆನಪಿಸಿಕೊಳ್ಳುವಿರಾ?**

‘ಚಂದವಳ್ಳಿಯ ತೋಟ’ ಚಿತ್ರದಲ್ಲಿನ ಒಂದು ದೃಶ್ಯದಲ್ಲಿ ಅನಾರೋಗ್ಯದಿಂದ ಮಂಚದ ಮೇಲೆ ಮಲಗಿರುತ್ತೇನೆ. ನನ್ನ ಮಾವನ ಪಾತ್ರ ಮಾಡುತ್ತಿದ್ದ ಉದಯಕುಮಾರ್ ಅವರು ರೋದಿಸುತ್ತಾ ನನ್ನ ಮೇಲೆ ಬಿದ್ದರು. ಅವರ ಭಾರಕ್ಕೆ ಜೀವ ಹೋದಂತಾಯಿತು. ನನ್ನ ಕಾಲು ಮುರಿದುಹೋದಂತೆ ಅನ್ನಿಸಿತು. ‘ಅಣ್ಣಾ ಅಣ್ಣಾ’ ಎಂದರೂ ಉದಯಕುಮಾರ್ ಮೇಲೇಳುತ್ತಿಲ್ಲ. ಎಮೋಷನಲ್ ಆದರೆ ಅವರನ್ನು ಎಚ್ಚರಿಸುವುದು ಕಷ್ಟ. ಆಮೇಲೆ ಎಲ್ಲರೂ ಬಂದು ಎಬ್ಬಿಸಿದರು. ಸ್ವಲ್ಪ ಹೊತ್ತು ನನ್ನ ಕಾಲು ಮಾತೇ ಕೇಳುತ್ತಿರಲಿಲ್ಲ.

‘ಬಾಳು ಬೆಳಗಿತು’ ಸಿನಿಮಾದಲ್ಲಿನ ಹುಚ್ಚಿಯ ಪಾತ್ರದಲ್ಲಿ ಸಿಂಗಲ್ ಷಾಟ್‌ನಲ್ಲಿ ನಟಿಸಿದ್ದನ್ನು ಈಗ ನೋಡಿದರೂ ಖುಷಿಯಾಗುತ್ತದೆ. ಈಗಿನ ಸಿನಿಮಾಗಳನ್ನು ನೋಡುತ್ತ, ನಮ್ಮ ಹಳೆಯ ಸಿನಿಮಾಗಳನ್ನು ನೆನಪಿಸಿಕೊಳ್ಳುವುದಿದೆ.

‘ದೇವರ ಗೆದ್ದ ಮಾನವ’ ಚಿತ್ರದ ಗೀತೆಯ ಒಂದು ಷಾಟ್ ‘ಓಕೆ’ ಆಯಿತು. ರಾಜ್‌ಕುಮಾರ್ ಮತ್ತೊಮ್ಮೆ ಟ್ರೈ ಮಾಡೋಣ ಎಂದರು. ಆ ಸಂದರ್ಭದಲ್ಲಿ ನನ್ನ ಕಾಲು ಟ್ವಿಸ್ಟ್ ಆಯಿತು. ಪಾದ ಹಿಂದುಮುಂದಾಗಿ ಬಿಟ್ಟಿತು. ರಾಜ್ ಹಿಡಿದುಕೊಂಡು ಕೆಳಗೆ ಕೂರಿಸಿದರು. ನಾನು ಅಳತೊಡಗಿದೆ. ಮೇಕಪ್‌ಮ್ಯಾನ್ ಅವರು ಓಡಿಬಂದು ಕಾಲನ್ನು ಸವರುತ್ತಾ ಅದನ್ನು ತಿರುಗಿಸಿಬಿಟ್ಟರು. ಜೀವ ಹೋದಂತಾಯಿತು. ಆಮೇಲೆ ಆಸ್ಪತ್ರೆಯಲ್ಲಿ ಮೂರು ತಿಂಗಳು ಚಿಕಿತ್ಸೆ ಪಡೆಯಬೇಕಾಯಿತು. ಮೂರು ತಿಂಗಳ ನಂತರವೂ ಕಾಲು ಸರಿಯಾಗಿ ಸ್ವಾಧೀನಕ್ಕೆ ಬರುತ್ತಿರಲಿಲ್ಲ. ಪುತ್ತೂರಿಗೆ ಹೋಗಿಯೂ ಚಿಕಿತ್ಸೆ ಪಡೆದೆ. ಮತ್ತೊಮ್ಮೆ ಕುದುರೆ ಸವಾರಿ ಚಿತ್ರೀಕರಣದಲ್ಲಿ ಬಿದ್ದು ಗಾಯಗೊಂಡಿದ್ದೆ. ಚಾಮುಂಡೇಶ್ವರಿ ತಾಯಿ ದಯೆಯಿಂದ ಜೀವ ಉಳಿಯಿತು.

‘ಚಕ್ರತೀರ್ಥ’ ಪಾತ್ರದಲ್ಲಿ ನನ್ನದು ದ್ವಿಪಾತ್ರ. ಅಪ್ಪನ ವಿರುದ್ಧವಾಗಿ ಮದುವೆಯಾದ ಮಗಳ ಪಾತ್ರ. ಗಂಡನ ಮನೆಯಲ್ಲಿ ಕಷ್ಟದ ಜೀವನ. ಹಬ್ಬದ ದಿನ ಹೊರಗೆ ಹೋದ ಗಂಡನಿಗೆ ಅಪಘಾತವಾಗುತ್ತದೆ. ಬ್ಯಾಂಡೇಜ್ ಸುತ್ತಿಕೊಂಡ ಗಂಡನನ್ನು ನೋಡಿ ರೋದಿಸುತ್ತ ಬಿಕ್ಕಳಿಸಿಕೊಂಡು ‘ನಿನ್ನ ರೂಪ ಕಣ್ಣಲಿ...’ ಎಂದು ಹಾಡುವ ದೃಶ್ಯ. ಗಂಡ ಸಾಯುತ್ತಾನೆ. ಆಗ ಎಷ್ಟು ಅತ್ತೆನೆಂದರೆ ಷಾಟ್ ಕಟ್ ಆಗಿದ್ದೇ ತಿಳಿಯಲಿಲ್ಲ. ನಿರ್ದೇಶಕರು, ಕ್ಯಾಮೆರಾಮನ್ ಬಂದು ಎಚ್ಚರಿಸಿದರೂ ಅಳು ನಿಲ್ಲಲಿಲ್ಲ. ‘ನಾನು ಚೆನ್ನಾಗಿಯೇ ಇದ್ದೇನೆ. ಸಿನಿಮಾದಲ್ಲಿನ ಪಾತ್ರವಿದು’ ಎಂದು ರಾಜ್ ಕೂಡ ಸಮಾಧಾನಿಸಿದರು. ಆ ಘಟನೆ ಈಗಲೂ ತಲೆಯಲ್ಲಿ ಕೂತಿದೆ. ‘ಯಾರಾದರೂ ಇಲ್ಲ’ ಎಂದರೆ ಆ ಸತ್ಯವನ್ನು ನಾನು ಜೀರ್ಣಿಸಿಕೊಳ್ಳುವುದು ಕಷ್ಟ. ನನಗೆ ದುಃಖ ತಡೆಯಲಿಕ್ಕಾಗಲ್ಲ. ಆ ಕಾರಣದಿಂದಲೇ ಸಾವಿನ ಸಂದರ್ಭಗಳಿಗೆ ನಾನು ಹೋಗುವುದು ಕಡಿಮೆ. ನನ್ನ ಈ ನಡವಳಿಕೆಯನ್ನು ಅಹಂಕಾರ ಎಂದುಕೊಂಡವರೂ ಇದ್ದಾರೆ. ಆದರೆ, ನನ್ನ ಸ್ವಭಾವ ಇರುವುದೇ ಹಾಗೆ. ಯಾವುದಾದರೂ ಸಾವನ್ನು ನೋಡಿದರೆ ಆ ಆಘಾತದಿಂದ ಹೊರಬರಲಿಕ್ಕೆ ಒಂದು ವಾರವೇ ಬೇಕಾಗುತ್ತೆ. ಕಲ್ಪನಾ ನನ್ನ ಬೆಸ್ಟ್ ಫ್ರೆಂಡ್. ಮದರಾಸಿನಲ್ಲಿ ನನ್ನ ಮನೆಯ ಹಿಂದಿನ ರಸ್ತೆಯಲ್ಲೇ ಅವರ ಮನೆ ಇದ್ದುದು. ಅವರ ಬಗ್ಗೆ ಎಷ್ಟು ಮಾತನಾಡಿರುವೆನೋ ನನಗೆ ತಿಳಿದಿಲ್ಲ. ಕಲ್ಪನಾ ತೀರಿಕೊಂಡಾಗ ‘ಎಡಕಲ್ಲು ಗುಡ್ಡ’ದ ಚಂದ್ರು ವಿಷಯ ತಿಳಿಸಿದರು. ಚೀರುತ್ತಲೇ ಅಳತೊಡಗಿದೆ. ಕಲ್ಪನಾ ಸಾಯುವುದು ಸಾಧ್ಯವೇ ಇಲ್ಲ ಎಂದು ಕಿರುಚಾಡಿದೆ. ಕಲ್ಪನಾ ಮನೆ ಕಟ್ಟಿದಾಗ ಹೋಗಲಿಕ್ಕೆ ನನಗೆ ಸಾಧ್ಯವಾಗಿರಲಿಲ್ಲ. ಸಾವಿನ ಸಂದರ್ಭದಲ್ಲಿ ಅವರನ್ನು ಮನೆಯ ಹಾಲ್‌ನಲ್ಲಿ ಮಲಗಿಸಿದ್ದರು. ಮುಖವನ್ನು ಸರಿಯಾಗಿ ನೋಡಲೂ ಆಗಲಿಲ್ಲ. ನನ್ನನ್ನು ನೋಡಿ, ‘ಯಾರಾದರೂ ಇವರನ್ನು ಮನೆಗೆ ಸೇರಿಸಿ. ಇಲ್ಲದೆ ಹೋದರೆ ಇವರನ್ನು ಆಸ್ಪತ್ರೆಗೆ ಸೇರಿಸಬೇಕಾಗುತ್ತೆ’ ಎಂದು ಅಬ್ಬಾಯಿನಾಯ್ಡು ಹೇಳಿದ್ದರು.

◆ **ಪುಟ್ಟಣ್ಣ ಕಣಗಾಲರೊಂದಿಗಿನ ನಿಮ್ಮ ಸ್ನೇಹ–ಸಂಬಂಧ ಯಾವ ಬಗೆಯದು?**

ಪುಟ್ಟಣ್ಣನವರು ಬಿ.ಆರ್. ಪಂತುಲು ಅವರ ಸಹಾಯಕನಾಗಿ ದುಡಿಯುತ್ತಿದ್ದ ದಿನಗಳಿಂದಲೂ

